# ಚನ್ನಗಿರಿ ತಾಲ್ಲೂಕಿನ ಬೆಂಗಳೂರಿನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ರಿ)

ಸಂಘದ ಸದಸ್ಯರಿಗೆ ನಮಸ್ಕಾರಗಳು,

2025-26 ರ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಬೆಂಗಳೂರಿನ ನಾಗರಬಾವಿಯ ಕಿಂಗ್ಸ್ ಕ್ಲಬ್ ನಲ್ಲಿ ಮೇ 11 ನೆ ತಾರೀಖು ಭಾನುವಾರ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ನಮ್ಮ ಸಂಘದ ಉಪಾಧ್ಯಕ್ಷರಾದ ಹಿರೇಕೋಗಲೂರು ಬಸವರಾಜುರವರು ವಹಿಸಿದ್ದರು. ಸಭೆಗೆ ಸದಸ್ಯರನ್ನು ಖಜಾಂಜಿಗಳಾದ ದೊಡ್ಡಬ್ಬಿಗೆರೆ ಪ್ರವೀಣ್ ರವರು ಸ್ವಾಗತಿಸಿದರು. ಸಭೆಯಲ್ಲಿ ೪೦ ಸದಸ್ಯರು ಭಾಗವಹಿಸಿದ್ದರು ಹಾಗೂ ಎಲ್ಲಾ ಸದಸ್ಯರು ತಮ್ಮ ಪರಿಚಯ ಮತ್ತು ಸಂಘದ ಕುರಿತು ತಮ್ಮ ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಸಭೆಗೆ ಪ್ರಧಾನ ಕಾರ್ಯದರ್ಶಿಗಳಾದ ದೊಡ್ಡಬ್ಬಿಗೆರೆ ಚಿನ್ಮಯಾನಂದರವರು 2023-25ರ ಸಾಲಿನ ಸಂಘದ ಕಾರ್ಯ ಚಟುವಟಿಗಳನ್ನು ಹಾಗೂ ಸಂಘ ನಡೆದು ಬಂದ ಹಾದಿಯನ್ನು ಸವಿಸ್ತಾರವಾಗಿ ಸಭೆಗೆ ತಿಳಿಸಿದರು.

ಈ ಕೆಳಗಿನ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

**ಸದಸ್ಯತ್ವ ಮತ್ತು ಸಂಘಟನೆ** : ಸಂಘದಲ್ಲಿ ಹಾಲಿ 220 ಸದಸ್ಯರು ಸದಸ್ಯತ್ವವನ್ನು ಪಡಿದಿದ್ದು. 2025-26 ರ ಸಾಲಿನ ವರ್ಷದಲ್ಲಿ ಸದಸ್ಯತ್ವ ಗುರಿಯನ್ನು 1 ಸಾವಿರಕ್ಕೆ ತಲುಪಲು ಚರ್ಚಿಸಲಾಯಿತು. ಬೆಂಗಳೂರಿನಲ್ಲಿ ನೆಲೆಸಿರುವ ಸುಮಾರು 5 ಸಾವಿರಕ್ಕೂ ಹೆಚ್ಚು ಕುಟುಂಬಗಳ ಮೊಬೈಲ್ ನಂಬರ್ ಸಂಗ್ರಹಿಸುವುದರ ಬಗ್ಗೆ ಚರ್ಚಿಸಲಾಯಿತು. ಟೆಲಿ ಕಾಲರ್ ಮೂಲಕ ನಮ್ಮ ಸಂಘದ ವಾಟ್ಸಪ್ಪ್ ಮೇನ್ ಗ್ರೂಪ್ನಲ್ಲಿರುವ ಸುಮಾರು 850 ಸದಸ್ಯರಿಗೆ ಕರೆ ಮಾಡಿ ಸದಸ್ಯತ್ವ ಪಡೆಯಲು ಮನವಿ ಮಾಡಲಾಗುವದು ಹಾಗೂ ಅವರನ್ನು ಸಂಬಂಧಪಟ್ಟ ಅವರ ಹಳ್ಳಿಗಳ ವಾಟ್ಸಪ್ಪ್ ಗ್ರೂಪ್ನಲ್ಲಿ ಸೇರ್ಪಡಸಿ ಇತರ ಅವರಿಗೆ ಪರಿಚಯವಿರುವ ಸದಸ್ಯರನ್ನು ಸಂಪಂಧಪಟ್ಟ ಹಳ್ಳಿಗಳ ವಾಟ್ಸಪ್ಪ್ ಗ್ರೂಪ್ನಲ್ಲಿ ಸೇರ್ಪಡಿಸಲು ಕೋರಲಾಗುವುದು. ಈ ಮೂಲಕ ಬೆಂಗಳೂರಿನಲ್ಲಿ ನೆಲಸಿರುವ ಸುಮಾರು 5 ಸಾವಿರಕ್ಕೂ ಹೆಚ್ಚು ಕುಟುಂಬಗಳನ್ನು ನಮ್ಮ ಸಂಘದ ಸಂಪರ್ಕಕ್ಕೆ ತರಲು ಗುರಿ ಹೊಂದಲಾಗಿದೆ.

**ಕಾರ್ಯಾಲಯ**: ಸಂಘದ ಕಾರ್ಯಾಚಟುವಟಿಕಗಳನ್ನು ವಿಸ್ತರಿಸುವ ದೃಷ್ಟಿಯಿಂದ ಕಾರ್ಯಾಲಯದ ಅವಶ್ಯಕತೆಯಿದ್ದು ಬೆಂಗಳೂರಿನ ನಗರಭಾವಿಯಲ್ಲಿ ಸಂಘದ ಸದಸ್ಯರಾದ ಕಾಕನೂರು ಪ್ರಮೋದ್ ರವರ ಕಾರ್ಯಾಲಯದಲ್ಲಿ ಪ್ರಾರಂಭಿಸಲು ಚರ್ಚಿಸಲಾಯಿತು. ಕಛೇರಿ ಕೆಲಸಕ್ಕೆ ಒಂದು ಸಿಬ್ಬಂದಿಯನ್ನು ಸಂದರ್ಶನದ ಮೂಲಕ ನೇಮಿಸಲಾಗುವುದು. ಕಛೇರಿಯ ನಿರ್ವಹಣೆಗಾಗಿ ಸದಸ್ಯರಿಂದ ಪ್ರತಿ ತಿಂಗಳು Rs **100** ರೂಗಳನ್ನ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಿಂದ ಪ್ರತಿ ತಿಂಗಳು Rs **500** ರೂ ಗಳನ್ನ ಸಂಗ್ರಹಿಸಲು ಚರ್ಚಿಸಲಾಯಿತು. ಸದಸ್ಯರು ಪ್ರತಿ ತಿಂಗಳು ಈ.ಸಿ.ಎಸ್(E.C.S) ವ್ಯವಸ್ಥೆಯಿಂದ ತಮ್ಮ ಬ್ಯಾಂಕ್ ಖಾತೆಗಳ ಮೂಲಕ ನೇರವಾಗಿ ಸಂಘದ ಬ್ಯಾಂಕ್ ಖಾತೆಗೆ ಹಣವನ್ನು ವರ್ಗಾಹಿಸಲು ಅನುಕೂಲ ಕಲ್ಪಿಸಲಾಗುವುದು.

**ನೂತನ ಕಾರ್ಯಕಾರಿ ಸಮಿತಿ:** ಸಂಘದ ಬೈಲಾ ದಂತೆ ಪ್ರತಿ ಎರಡು ವರ್ಷಕ್ಕೊಮ್ಮೆ ಸಂಘದ ವಾರ್ಷಿಕ ಮಹಾಸಭೆಯಲ್ಲಿ ನೂತನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಬೇಕಾಗಿತ್ತು. ಈ ವಾರ್ಷಿಕ ಮಹಾಸಭೆಯು ಎರಡನೆ ವಾರ್ಷಿಕ ಮಹಾಸಭೆ ಆಗಿದ್ದು ಸಭೆಯ ಕೋರಂ ಅಂದರೆ 1:3 ಸಂಖ್ಯೆಗೂ ಕಡಿಮೆ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರಿಂದ ನೂತನ

**ಚನ್ನಗಿರಿ ತಾಲ್ಲೂಕಿನ ಬೆಂಗಳೂರಿನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ರಿ)**

ಕಾರ್ಯಕಾರಿ ಸಮಿತಿ ಆಯ್ಕೆ ಯನ್ನು ಮುಂದಿನ ಸಭೆ ಜೂನ್ 15ನೆ ತಾರೀಖಿಗೆ ಮುಂದೂಡಲಾಗಿದೆ. ಆಸಕ್ತಿವುಳ್ಳ ಸಂಘದ ಸದಸ್ಯರು 2025-27 ರ ಸಾಲಿನ ಎರಡು ವರ್ಷಕ್ಕೆ ರಚಿಸಲು ಪಡುವ ನೂತನ ಕಾರ್ಯಕಾರಿ ಸಮಿತಿಯಲ್ಲಿ ಜವಾಬ್ದಾರಿ ನಿರ್ವಹಿಸಲು ನಿಮ್ಮ ನಾಮನಿರ್ದೇಶನವನ್ನು ವಾಟ್ಸಪ್ಪ್ ಗ್ರೂಪ್ ನಲ್ಲಿ ಶೇರ್ ಮಾಡುವ ನಾಮನಿರ್ದೇಶನ ಅರ್ಜಿಯನ್ನ ಭರ್ತಿ ಮಾಡಿ ದಿನಾಂಕ ಜೂನ್ 15 ನೆ ತಾರೀಖನೊಳಗೆ ವಾಟ್ಸಪ್ಪ್ ಗ್ರೂಪ್ ನಲ್ಲೆ ಹಿಂತಿರುಗಿಸಲು ಕೋರಲಾಗಿದೆ. ಆಸಕ್ತಿವುಳ್ಳವರು ಮುಂದಿನ ಜೂನ್ 15ನೆ ತಾರೀಖು ನಡೆಯುವ ಸಭೆಯಲ್ಲಿ ತಪ್ಪದೆ ಭಾಗವಹಿಸಬೇಕು. 26 ಕ್ಕೂ ಹೆಚ್ಚು ಅರ್ಜಿ ಬಂದಲ್ಲಿ ನಾಮನಿರ್ದೇಶನ ವಾಪಾಸ ಪಡೆಯಲು ಜೂನ್ 15ನೆ ತಾರೀಖನವರಿಗೆ ಸಮಯಾವಕಾಶ ನೀಡಲಾಗುವುದು .

**ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ:** ಸಂಘದ ಸದಸ್ಯರಿಗೆ ಆರ್ಥಿಕವಾಗಿ ಅನುಕೂಲವಾಗಲು ನೂತನ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಅವಶ್ಯಕತೆಯ ಕುರಿತು ಚರ್ಚಿಸಲಾಯಿತು. 500 ಕ್ಕೂ ಹೆಚ್ಚು ಸದಸ್ಯರಿಂದ ಷೇರುಗಳನ್ನು ಸಂಗ್ರಹಿಸುವುದು ಹಾಗೂ ಪ್ರತಿ ಷೇರುನ ಬೆಲೆಯು Rs 1000/- ಆಗಿದ್ದು ಸುಮಾರು 500 ಕ್ಕೂ ಹೆಚ್ಚು ಸದಸ್ಯರಿಂದ Rs 10 ಲಕ್ಷಕ್ಕೂ ಹೆಚ್ಚು ಹಣ ಸಂಗ್ರಹಿಸಲು ಗುರಿ ಹೊಂದಲಾಗಿದೆ. ಷೇರುದಾರರು ಕಡ್ಡಾಯವಾಗಿ Rs 500/- ರೂ ಪಾವತಿಸಿ ಚನ್ನಗಿರಿ ತಾಲ್ಲೂಕಿನ ಬೆಂಗಳೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರಾಗಿರಬೇಕು. ಜೂನ್ 29 ನೆ ತಾರೀಖು ಬೆಂಗಳೂರಿನಲ್ಲಿ ಪ್ರಮೋಟರ್ಸ್ ಸಭೆ ನಡೆಸಲು ಚರ್ಚಿಸಲಾಗಿದೆ. ಆಸಕ್ತಿವುಳ್ಳರು ನಿಮ್ಮ ಸ್ನೇಹಿತರನ್ನು ಸಭೆಗೆ ಕರೆಯಲು ಕೋರಲಾಗಿದೆ. (**A**ssociation of **B**engaluru Residents from **C**hannagiri Taluk Credit Co operative Society i.e., **ABC Credit Co operative Society**) ಎಂದು ಹೆಸರು ಕರೆಯಲು ಚರ್ಚೆಸಲಾಯಿತು.

**ಸ್ನೇಹ ಸಮ್ಮಿಲನ**: 2025-26 ರ ಸಾಲಿನ ನಮ್ಮ ಸಂಘದ ಸಾಂಸ್ಕೃತಿಕ ಹಬ್ಬ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಬೆಂಗಳೂರಿನ ಟೌನ್ ಹಾಲ್ ನಲ್ಲಿ 2026 ಜನವರಿ ತಿಂಗಳನಲ್ಲಿ ನಡೆಸಲು ಚರ್ಚಿಸಲಾಯಿತು.

**ಸಾಮಾಜಿಕ ಕಾರ್ಯಕ್ರಮಗಳು**: 2025-26 ರ ಸಾಲಿನ ಚನ್ನಗಿರಿಯಲ್ಲಿ ಆಯೋಜಿಸುವ ಸಾಮಾಜಿಕ ಕಾರ್ಯಕ್ರಮಗಳನ್ನು ನೂತನ ಕಾರ್ಯಕಾರಿ ಸಮಿತಿ ನಿರ್ಧರಿಸಲು ಚರ್ಚೆಸಲಾಯಿತು.

**ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳು**: 2025-26 ರ ಸಾಲಿನ ಸಂಘದ ಸದಸ್ಯರಿಗೆ ಆಯೋಜಿಸುವ ಕಾರ್ಯಕ್ರಮಗಳನ್ನು ನೂತನ ಕಾರ್ಯಕಾರಿ ಸಮಿತಿ ನಿರ್ಧರಿಸಲು ಚರ್ಚೆಸಲಾಯಿತು.

ನಮ್ಮ ಸಂಘದ ಉಪಾಧ್ಯಕ್ಷರಾದ ಯರಗಟ್ಟಿಹಳ್ಳಿ ಗಿರೀಶ್ ರವರಿಗೆ ಸಭೆಯಲ್ಲಿ ಒಂದು ನಿಮಿಷ ಮೌನಾಚರಣೆ ಮೂಲಕ ಸಂತಾಪ ಸೂಚಿಸಲಾಯಿತು.

ಧನ್ಯವಾದಗೊಳೊಂದಿಗೆ

ಚಿನ್ಮಯಾನಂದ ಎ ಸಿ , ಪ್ರಧಾನ ಕಾರ್ಯದರ್ಶಿಗಳು

ಚನ್ನಗಿರಿ ತಾಲ್ಲೂಕಿನ ಬೆಂಗಳೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ